**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,ಹುಣಸೂರು**

**ಸಿಸಿ ನಂ.3338/2022**

**ಫಿರ್ಯಾದುದಾರರುಃ** ಸರ್ಕಾರ (ಹುಣಸೂರು ಪಟ್ಟಣ ಪೋಲೀಸರಿಂದ)

– ವಿರುದ್ಧ –

**ಆರೋಪಿ:** ನಬಿಶಾ,ಕೋಂ ಲೇಟ್ ಹಂಶಾ,
ಸುಮಾರು 55 ವರ್ಷ, ಹೋಟೇಲ್ ಕೆಲಸ
ವಾಸಃ ಮಂಜುನಾಥ ಬಡಾವಣೆ,
ಹುಣಸೂರು ಪಟ್ಟಣ, ಮೈಸೂರು ಜಿಲ್ಲೆ.

**ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313ರ ಅಡಿಯಲ್ಲಿ ಆರೋಪಿತರ ಹೇಳಿಕೆ**

| | |
|---|---|
| ಪ್ರಶ್ನೆ 1: | ಅಭಿಯೋಜನೆಯ ಪರವಾಗಿ ವಿಚಾರಣೆಯಾದ ಸಾಕ್ಷ್ಯಗಳನ್ನು ನೀವು ತಿಳಿದುಕೊಂಡಿರುವಿರಾ? |
| ಉತ್ತರ: | ತಿಳಿದಿದೆ |
| ಆರೋಪಿ | ನಬಿಶಾ |
| ಪ್ರಶ್ನೆ 2: | ಪಿ.ಡಬ್ಲ್ಯೂ – 2 ರಾಜ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 24.01.2017ರಂದು ಮಂಗಳವಾರ ರಾತ್ರಿ 10.00 ರಿಂದ 10.30ರ ಸಮಯ ನಗರಸಭೆಯಿಂದ ನೀರು ಬಿಟ್ಟಾಗ ಅವರ ಮನೆ ಎದುರು ವಾಸವಾಗಿರುವ 1ನೇ ಆರೋಪಿ ಪ್ರಕಾಶರವರು ನೀರಿನ ವಿಚಾರವಾಗಿ ಅವರ ಜೊತೆ ಗಲಾಟೆ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ | ನಬಿಶಾ |
| ಪ್ರಶ್ನೆ 3: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿಯವರು ನೀರಿನ ಸಂಪರ್ಕವನ್ನು ಅಕ್ರಮವಾಗಿ ಪಡೆದಿದ್ದು, ಈ ವಿಚಾರವನ್ನು ಸದರಿ ಏರಿಯಾಕ್ಕೆ ನೀರು ಬಿಡುವ ಕೆಂಪಣ್ಣ ಅವರಿಗೆ ಹೇಳಿ ನೀರಿನ ಸಂಪರ್ಕ ನಗರಸಭೆಯವರು ತೆಗೆಸುತ್ತಾರೆ ಎಂದು 1ನೇ ಆರೋಪಿ ಗಲಾಟೆ ಮಾಡಿದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು |

| | |
|---|---|
| | ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ | ನಬಿಶಾ |
| ಪ್ರಶ್ನೆ 4: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆ ಸಮಯ ಅವರು ಹಾಗೂ ಚಾಸಾ.2ರವರು ನೀರು ಹಿಡಿಯುವಾಗ 3ನೇ ಆರೋಪಿಯಾದ ನಿಮ್ಮ ಜೊತೆ ಇತರ ಆರೋಪಿತರು ಅವರಿಗೆ ಅವಾಚ್ಯ ಶಬ್ದಗಳಿಂದ ಅಂದರೆ ಅಶ್ಲೀಲ ಪದಗಳಿಂದ ಬೈದು, ನೀರಿನ ಸಂಪರ್ಕ ತೆಗೆಸಿದರೆ ನಿಮ್ಮನ್ನು ಕೊಲೆ ಮಾಡುತ್ತೇವೆ ಎಂದು ಕೊಲೆ ಬೆದರಿಕೆ ಹಾಕಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ | ನಬಿಶಾ |
| ಪ್ರಶ್ನೆ 5: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ 1ನೇ ಆರೋಪಿಯ ಹೆಂಡತಿ 2ನೇ ಆರೋಪಿ ವಿಜಿ ಅವರು ಅವರ ಯಜಮಾನರು ಮೊದಲೇ ಕೊಲೆ ಮಾಡಿ ಬಂದಿದ್ದಾಗಿ, ಈಗ ನಿಮ್ಮನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು 1ನೇ ಆರೋಪಿ ಹೇಳಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ | ನಬಿಶಾ |
| ಪ್ರಶ್ನೆ 6: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, 1ನೇ ಆರೋಪಿ 2ನೇ ಆರೋಪಿಗೆ ಮಚ್ಚು ತೆಗೆದುಕೊಂಡು ಬಾ ಎಂದು ಹೇಳಿದ್ದು, ಪಕ್ಕದ ಮನೆಯವರಾದ 1ನೇ ಆರೋಪಿಯು ನಫೀಜಾ ಇವರದ್ದು ಒಂದೇ ಕುಟುಂಬ ಇವರನ್ನು ಮುಗಿಸಿ ಎಂದು ಪ್ರಚೋದನೆ ಮಾಡಿದ್ದು, ಅಲ್ಲಿ ಸುಮಾರು ಜನ ಸೇರಿಕೊಂಡಿದ್ದರು ಎಂದು ಸಾಕ್ಷಿ |

| | |
|---|---|
| | ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ | ನಬಿಶಾ |
| ಪ್ರಶ್ನೆ 7: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಈ ಬಗ್ಗೆ ಅವರ ತಮ್ಮ ಆರ್.ರವಿ ದಿನಾಂಕಃ 25.01.2017ರಂದು ದೂರು ನೀಡಿದ್ದು, ಸದರಿ ದೂರನ್ನು ಪೊಲೀಸರು ಸ್ವೀಕರಿಸದೇ ಇರುವುದರಿಂದ ಅವರು ಪುನಃ ದಿನಾಂಕಃ 28.01.2017ರಂದು ಪೊಲೀಸರಿಗೆ ದೂರು ನೀಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ | ನಬಿಶಾ |
| ಪ್ರಶ್ನೆ 8: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 28.01.2017 ರಂದು ಅವರು ಪೊಲೀಸರಿಗೆ ದೂರು ನೀಡಿರುವುದಾಗಿ, ಸದರಿ ದೂರನ್ನು ನಿಪಿ-3ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ | ನಬಿಶಾ |
| ಪ್ರಶ್ನೆ 9: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಿಪಿ-1ಕ್ಕೆ ದಿನಾಂಕ 28.01.2017 ರಂದು ಅವರು ಸ್ಥಳ ತೋರಿಸಿದ ಮೇರೆಗೆ ಪೊಲೀಸರು ಸ್ಥಳದಲ್ಲಿ ಮಹಜರು ಮಾಡಿದ್ದು, ಸ್ಥಳದಲ್ಲಿಯೇ ಅವರ ಮತ್ತು ಚಾಸಾ-4ರವರ ಸಹಿ ಪಡೆದಿರುತ್ತಾರೆ ಎಂದು, ಹಾಗು ನಿಮ್ಮನ್ನು ನೋಡಿ ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |

| | |
|---|---|
| ಆರೋಪಿ | ನಬಿಶಾ |
| ಪ್ರಶ್ನೆ 10: | ಪಿ.ಡಬ್ಲ್ಯು-4ಪಾಪೇಗೌಡ, ಹುಣಸೂರು ಪಟ್ಟಣ ಠಾಣೆಯ ಆಗಿನ ಎ ಎಸ್ ಐ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 28.01.2017ರಂದು ಅವರು ಠಾಣಾ ಪ್ರಭಾರದಲ್ಲಿದ್ದಾಗ ಸಂಜೆ 17.45ರ ಸಮಯ ಚಾಸಾ.1ರವರು ಠಾಣೆಗೆ ಹಾಜರಾಗಿ ನೀಡಿದ ನಿಪಿ-3ರ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಃ 31/2017 ಕಲಂ.341, 504, 506, 114 ರೆ/ವಿ 34 ಐ.ಪಿ.ಸಿ. ರೀತ್ಯಾ ಪ್ರಕರಣ ದಾಖಲಿಸಿ ನಿಪಿ-4ರಂತೆ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ರವಾನಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ | ನಬಿಶಾ |
| ಪ್ರಶ್ನೆ 11: | ಪಿ.ಡಬ್ಲ್ಯೂ - 5 ರವಿ ರವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿ ಮತ್ತು ಅವರ ಮನೆ ಎದುರು ಬದುರು ಇದ್ದು, ಚಾಸಾ.1 ಅವರ ಅಣ್ಣನಾಗಿದ್ದು, ಚಾಸಾ.3 ಗೊತ್ತಿದ್ದು, ಪಕ್ಕದ ಮನೆಯವರಾಗಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ | ನಬಿಶಾ |
| ಪ್ರಶ್ನೆ 12: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 24.01.2017ರಂದು ರಾತ್ರಿ 10.30ರ ಸಮಯದಲ್ಲಿ ನೀರು ಬಂದಿದ್ದು, ಅವರು ಮತ್ತು ಚಾಸಾ.1ರವರು ನೀರನ್ನು ತುಂಬುತ್ತಿದ್ದಾಗ ಆ ಸಮಯದಲ್ಲಿ ಎದುರು ಮನೆಯಲ್ಲಿದ್ದ 1ನೇ ಆರೋಪಿ ಅವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದು, ಚಾಸಾ.1ರವರು 1ನೇ ಆರೋಪಿಯನ್ನು ಪ್ರಶ್ನಿಸಿದಾಗ ಅವರ ಮನೆಗೆ ನೀರನ್ನು ಬಿಡಬೇಡಿ |

| | |
|---|---|
| | ಎಂದು ಜಗಳ ತೆಗೆದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ | ನಬಿಶಾ |
| ಪ್ರಶ್ನೆ 13: | ಇದೇ ಸಾಕ್ಷಿಯು ತಮ್ಮ ಸಾಕ್ಷ್ಯದಲ್ಲಿ, ನೀವೇ ಕೇಳಿಕೊಳ್ಳಿ ಎಂದು ಹೇಳಿದ್ದು, 1ನೇ ಆರೋಪಿ ಮೇನ್ ಲೈನ್ ಕನೆಕ್ಷನ್ ಅನ್ನು ಕಟ್ ಮಾಡಿ ಎಂದು ಪುರಸಭೆಗೆ ಹೇಳಿದ್ದೀರಾ, ಅಣ್ಣ – ತಮ್ಮಂದಿರು ಇಬ್ಬರನ್ನು ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿದರು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ | ನಬಿಶಾ |
| ಪ್ರಶ್ನೆ 14: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಈಗಾಗಲೇ ಅವರು ಕೊಲೆ ಮಾಡಿ ಜೈಲಿಗೆ ಹೋಗಿ ಬಂದಿದ್ದೇನೆ ಎಂದು ತೊಡೆ ತಟ್ಟಿದ್ದು, ಮನೆಯಿಂದ ಮಚ್ಚನ್ನು ತೆಗೆದುಕೊಂಡು ಬರುವಂತೆ 2ನೇ ಆರೋಪಿಗೆ ತಿಳಿಸಿದ್ದು, ಈಗಾಗಲೇ ಒಂದು ಕೊಲೆಯನ್ನು ಮಾಡಿದ್ದೀರಾ ಧೈರ್ಯವಾಗಿ ಇವರನ್ನು ಕೊಲೆ ಮಾಡಿ ಎಂದು ಮಚ್ಚನ್ನು ಕೊಟ್ಟು ಕುಮ್ಮಕ್ಕು ನೀಡಿದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ | ನಬಿಶಾ |
| ಪ್ರಶ್ನೆ 15: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಈ ಪ್ರಕರಣದ ಆರೋಪಿ ಬಂದು ಇವರದ್ದು ಒಂದೇ ಕುಟುಂಬ ಇದ್ದು, ಇವರನ್ನು ತೆಗೆದು ಹಾಕು ಎಂದು ಕುಮ್ಮಕ್ಕು ನೀಡಿದ್ದು, ಆ ಸಮಯದಲ್ಲಿ ಚಾಸಾ.3ರವರು ಬಂದು ಜಗಳ ಬಿಡಿಸಿದ್ದು, ಆದರೂ ಸಹ 1ನೇ ಆರೋಪಿ ಅವರ ಮನೆಯ ಬಳಿ ಬಂದು ಅವರನ್ನು ಹಿಡಿದು ತಳ್ಳಿ |

| | |
|---|---|
| | ಮಚ್ಚನ್ನು ತೋರಿಸಿ ಕೊಲೆ ಬೆದರಿಕೆ ಹಾಕಿದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ | ನಬಿಶಾ |
| ಪ್ರಶ್ನೆ 16: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಚಾಸಾ.1ರವರು ದಿನಾಂಕಃ 28.01.2017ರಂದು ದೂರನ್ನು ನೀಡಿದ್ದು, ಗಲಾಟೆಯಾದ ಮರುದಿನ ಅವರು ಪೊಲೀಸ್ ಠಾಣೆಗೆ ಹೋಗಿ ವಿಚಾರವನ್ನು ತಿಳಿಸಿದ್ದು, ಪೊಲೀಸರು ಈಗ ಯಾವುದೇ ದೂರು ಬೇಡ ಎಂದು ಹೇಳಿದ್ದು, ಆದರೆ ಪೊಲೀಸರು ಪುನಃ ಬೆದರಿಕೆ ಹಾಕುತ್ತಿದ್ದರಿಂದ ಚಾಸಾ.1ರವರು ದೂರನ್ನು ನೀಡಿದ್ದಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ | ನಬಿಶಾ |
| ಪ್ರಶ್ನೆ 17: | ಪಿ.ಡಬ್ಲ್ಯೂ – 6 ಷಣ್ಮುಗಂ, ಇವರು ಆಗಿನ ಹುಣಸೂರು ಪಟ್ಟಣ ಠಾಣೆಯಲ್ಲಿ ಪಿ.ಎಸ್.ಐ.ಯಾಗಿ ಕರ್ತವ್ಯ ನಿರ್ವಹಿಸಿದ್ದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 29.01.2017ರಂದು ಈ ಪ್ರಕರಣದ ಕಡತವನ್ನು ಚಾಸಾ.6ರವರಿಂದ ಸ್ವೀಕರಿಸಿ, ಕಡತವನ್ನು ಪರಿಶೀಲಿಸಿ ತನಿಖೆಯನ್ನು ಮುಂದುವರೆಸಿ, ಅದೇ ದಿನ ಚಾಸಾ.1ರವರು ಕೃತ್ಯ ನಡೆದ ಸ್ಥಳವನ್ನು ತೋರಿಸಿದ ಮೇರೆಗೆ ಪಂಚರಾದ ಚಾಸಾ.4 ಮತ್ತು ಚಾಸಾ.5ರ ಸಮಕ್ಷಮ ಬೆಳಿಗ್ಗೆ 11.30 ರಿಂದ 12.20ರವರೆಗೆ ಮಹಜರು ಕ್ರಮವನ್ನು ಜರುಗಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ | ನಬಿಶಾ |
| ಪ್ರಶ್ನೆ 18: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಿಪಿ.1 |

| | |
|---|---|
| | ಮಹಜರ್ ನಲ್ಲಿ ಅವರ ಸಹಿಯನ್ನು ನಿಪಿ.1(ಬಿ) ಎಂದ ಗುರುತಿಸಿದ್ದು, ಅದೇ ದಿನ ಸಾಕ್ಷಿದಾರರಾದ ಚಾಸಾ.2 ಮತ್ತು ಚಾಸಾ.3ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದು, ಈ ಹಂತದಲ್ಲಿ ತನಿಖೆ ಪೂರ್ಣಗೊಳಿಸಿ ದಿನಾಂಕಃ 04.02.2017ರಂದು 3ನೇ ಆರೋಪಿಯಾದ ನಿಮ್ಮ ಮತ್ತು ಇತರ ಆರೋಪಿತರ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ | ನಬಿಶಾ |
| ಪ್ರಶ್ನೆ 19: | ನಿಮಗೆ ಈ ಕೇಸಿನ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೇ? |
| ಉತ್ತರ: | ಇಲ್ಲ |
| ಆರೋಪಿ | ನಬಿಶಾ |
| ಪ್ರಶ್ನೆ 20: | ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ? |
| ಉತ್ತರ: | ಇಲ್ಲ |
| ಆರೋಪಿ | ನಬಿಶಾ |

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಮತ್ತು ಸರಿಯಾಗಿದೆಯೆಂದು ದೃಢೀಕರಿಸಿರುತ್ತೇನೆ.

ದಿನಾಂಕಃ 02.06.2026.

Sd/-

(ಅನಿತ)

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ., ಹುಣಸೂರು.**